**ದಿನಾಂಕಃ 18.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಪಿರ್ಯಾದಿ ಪರ ವಕೀಲರಿಂದಃ**

ಸಾಕ್ಷಿಯು ದಿ.06.09.2006 ರ ಕ್ರಯಪತ್ರದ ದೃಡಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದಃ**

ನಿಪಿ-6 ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಅದು ಕ್ರಯಪತ್ರವಾಗಿರುತ್ತದೆ. ಸದರಿ ಕ್ರಯಪತ್ರದಲ್ಲಿ ನಾನು ಸರ್ವೇ ನಂ.33/4 ರ ಜಮೀನಿನಲ್ಲಿ 1 ಎಕರೆ 29 ಗುಂಟೆ ಜಾಗವನ್ನು ರೂ.3,02,000/- ಗಳಿಗೆ ಮಾರಾಟ ಮಾಡಿರುತ್ತೇನೆ. ಕ್ರಯಪತ್ರ ಮಾಡಿಕೊಳ್ಳುವ ಮೊದಲು ಖರೀದಿದಾರರ ಜೊತೆ ಯಾವುದೇ ಕರಾರುಪತ್ರವನ್ನು ಮಾಡಿಕೊಂಡಿರುವುದಿಲ್ಲ. ಕ್ರಯವಾದ ದಿನವೆ ಖರೀದಿದಾರರು ತಾಲ್ಲೂಕು ಕಚೇರಿಯಲ್ಲಿ ನನಗೆ ರೂ.3,02,000/- ನಗದನ್ನು ನೀಡಿರುತ್ತಾರೆ.

ನಿಪಿ-6 ನ್ನು 2 ನೇ ಕಂಡಿಕೆಯಲ್ಲಿ ಜಮೀನನ್ನು ಮಾರುತ್ತಿರುವ ಕಾರಣವನ್ನು ನಾನು ನನ್ನ ಮೈನರ್ ಮಕ್ಕಳ ಪೋಷಣೆ ಮತ್ತು ಅವರ ವಿದ್ಯಾಭ್ಯಾಸಕ್ಕಾಗಿ ಮತ್ತು ಇತರೆ ವ್ಯವಹಾರಗಳ ಕಾರಣಕ್ಕೆ ಅತಿಜರೂರಾಗಿ ಹಣಬೇಕಾಗಿ ಎಂದು ತೋರಿಸಿರುತ್ತೇನೆಂದರೆ ಸರಿ. ಬಂದ ಹಣದಿಂದ ಒಂದ ಅಂಗಡಿಯನ್ನು ಹಾಕಿಕೊಂಡಿರುತ್ತೇನೆ. ಹಾಕಿಕೊಂಡ ಅಂಗಡಿಯಿಂದ ಪ್ರತಿದಿನ 2 ಸಾವಿರ ರೂಪಾಯಿ ಗಳು ಆದಾಯ ಬರುತ್ತಿತ್ತು. ಹಣವನ್ನು ಬಳಸಿ ಅಂಗಡಿಯನ್ನು ಹಾಕಿಕೊಂಡ ನಂತರವೂ ಸಹ ನನ್ನ ಬಳಿ ಇನ್ನೂ 2 ಲಕ್ಷಗಳು ಬಾಕಿ ಉಳಿದಿತ್ತು. ಆ ಮೊತ್ತವನ್ನು ಮನೆಯಲ್ಲಿ ಇಟ್ಟಿರುತ್ತೇನೆ. ಮೊತ್ತವನ್ನು ಬ್ಯಾಂಕ್‌ನಲ್ಲಿ ಜಮಾ ಮಾಡಿ ಇಡುವ ಅಭ್ಯಾಸ ಇರವುದಿಲ್ಲ.

ನನ್ನ ದೂರಿನಲ್ಲಿ ಹೇಳಿದಂತೆ 2006 ರಲ್ಲಿ ಆದ ಕ್ರಯಪತ್ರದಿಂದ ಬಂದ ಹಣವನ್ನು ಆರೋಪಿಗೆ ಯಾವಾಗ ಕೊಟ್ಟಿರುತ್ತೇನೆಂದು ನೆನಪಿರುವುದಿಲ್ಲ. ಕ್ರಯಪತ್ರದಿಂದ ಬಂದ ಹಣವನ್ನು ನಾನು ಆರೋಪಿಗೆ ಕೊಟ್ಟಿರುವುದಿಲ್ಲ, ನ್ಯಾಯಾಲಯದ ಮುಂದೆ ಆ ರೀತಿ ಕೊಟ್ಟಿರುತ್ತೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಒಂದ ವೇಳೆ ಆ ರೀತಿ ಕೊಟ್ಟಿದ್ದೆ ಆದಲ್ಲಿ ಅದರ ಬಗ್ಗೆ ನಾನು ನೀಡಿದ ನೋಟಿಸ್ ಹಾಗೂ ದೂರಿನಲ್ಲಿ ನಮೂದಿಸುತ್ತಿದ್ದೇನೆಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2006 ರಲ್ಲಿ ನನಗೆ ಬಂದ ರೂ.3,00,000/- ಹಣದಿಂದ ಸುಮಾರು 10 ವರ್ಷಕ್ಕೂ ಮೇಲೆ ಅದೇ ಹಣವನ್ನು ಆರೋಪಿಗೆ ಸಾಲವನ್ನಾಗಿ ನೀಡಿರುತ್ತೇನೆಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಆರೋಪಿಗೆ ನಾನು ಹೇಳಿದಂತೆ ಯಾವುದೇ ಹಣವನ್ನು ನೀಡಿರುವುದಿಲ್ಲ ಆದರೂ ಸಹ ನೀಡಿರುತ್ತೇನೆಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**